## ಬಹುಮಾನಿತ ಪ್ರಶ್ನೆ

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಡಸ್ಟ್‌ಬಿನ್‌ಗೂ, ಮನುಷ್ಯನ ಹೊಟ್ಟೆಗೂ ಏನು ವ್ಯತ್ಯಾಸ?

ತೊಟ್ಟಿಯಲ್ಲಿ ಹುಳು ಏಳುತ್ತದೆ; ಹೊಟ್ಟೆಯಲ್ಲಿ ಹುಳು ಬೀಳುತ್ತದೆ.

ರಾಜಾ ವೆಂಕಟೇಶ್, ಹಾಸನ

ಕೊರೊನ ಹರಡುತ್ತಿದ್ದರೂ ಹೆದರದೆ ಬೇಜವಾಬ್ದಾರಿಯಾಗಿ ಇರೋಣ ಎನ್ನುವವರಿಗೆ ಏನೆನ್ನಬೇಕು?

ಮೂರು ಬಾರಿ ಸೀನಿ, ಎರಡು ಬಾರಿ ಕೆಮ್ಮಿ ಹೊಣೆ ಸ್ವಪ್ರಚೋದಿತವಾಗುತ್ತದೆ.

ವಿಜಯಕುಮಾರ್ ಎಚ್.ಕೆ. ಶಕ್ತಿನಗರ

ಸೃಷ್ಟಿಯು ಮನುಷ್ಯನನ್ನು ಕೈಗೊಂಬೆಯಾಗಿಸಿಕೊಂಡು ಏಕೆ ಕೃತ್ರಿಮವೆಸಗುತ್ತಿದೆ?

ಮನುಷ್ಯನು ಸೃಷ್ಟಿಯನ್ನು ಕಾಲ ಕಸಕ್ಕಿಂತ ಕಡೆಯಾಗಿ ಕಂಡದ್ದರಿಂದ.

ದೀಪಕ್ ಘಾಟಿ, ಬೆಂಗಳೂರು

ಮುಂದಾಳುಗಳನ್ನು ಹಿಂಬಾಲಿಸುವವರನ್ನು 'ಹಿಂದಾಳುಗಳು' ಎನ್ನಬಾರದೇಕೆ?

ಏಕೆಂದರೆ ಅವರು ಕೇವಲ him– ಅವನಿಗೆ ಸೇರಿದ ದಾಳಗಳು ಅಷ್ಟೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಹೆಲ್ಮೆಟ್ ಕಡ್ಡಾಯವಾದಾಗ ಪೆಟ್ರೋಲ್ ಟ್ಯಾಂಕ್‌ನ ಮೇಲೆ, ಮಾಸ್ಕ್ ಕಡ್ಡಾಯವಾದಾಗ ಕತ್ತಿನ ಮೇಲೆ. ಮುಂದೇನು?

ಹೋಂ ಐಸೊಲೇಷನ್ ಕಡ್ಡಾಯವಾದಾಗ ಕಾಂಪೌಂಡ್ ಮೇಲೆ.

ವಿ. ಹೇಮಂತಕುಮಾರ್, ಬೆಂಗಳೂರು

ಅಣಬೆಗೂ, ಆಲದ ಮರಕ್ಕೂ ಇರುವ ವ್ಯತ್ಯಾಸವೇನು?



ಅಣಬೆಯ ಕೆಳಗೆ ಜೌಗು; ಆಲದ ಮರದ ಕೆಳಗೆ ಗೌಜು.

ಎಂ.ಎಸ್. ಉಷಾ ಪ್ರಕಾಶ, ಮೈಸೂರು

ಕೊರೊನ ನಿಯಂತ್ರಿಸಲು ನಿಮ್ಮ ಬುದ್ಧಿಮಟ್ಟದಿಂದ ಮದ್ದು ಕಂಡುಹಿಡಿಯುವಿರಾ?

ಜೈನ ಸಂನ್ಯಾಸಿಯಂತೆ ವಸ್ತ್ರ, ನಡೆ, ನುಡಿ ಇದ್ದರೆ ಕೊರೊನ ದೂರವೇ.

ರಾಂಚಂದ್ರ ಕೊಪ್ಪಲು, ತೀರ್ಥಹಳ್ಳಿ

ಕೊರೊನಾ ಕಾಲದಲ್ಲಿ ಶಂಕಿತರು, ಸೋಂಕಿತರು, ಆತಂಕಿತರು. ಮುಂದೆ...?

ಕೊರೊನಾ ಕಿಕ್‌ಬ್ಯಾಕ್‌ಗಳ ಬಗ್ಗೆ ನಿಶ್ಚಿತರು, ಅನಿಶ್ಚಿತರು, ಚರ್ಚಿತರು, ಶಿಕ್ಷಿತರು...

ರಾಜು ಶಿವ, ಊರಿಲ್ಲ

ರಾಮ ಮಂದಿರದ ಬಗ್ಗೆ ರಾಮ್‌ರ ಅಭಿಪ್ರಾಯ?

ಕೇಸ್ ಇತ್ಯರ್ಥವಾದಮೇಲೆ ಮತ್ತೆ ರಾಮಾಯಣ ಆಗದಿರಬೇಕಾದರೆ ಕಟ್ಟಡ ನಿರ್ಮಿಸಬೇಕು.

ಅನಸೂಯ ಟಿ. ಕೇದಿಗೆಮನೆ

ನ್ಯೂಸ್ ಚಾನಲ್ ನೋಡ್ತಾ ಕೂತರೆ ಕೊರೊನ ಅಮರಿಕೊಂಡೇ ಬಿಡ್ತೇನೋ ಎನ್ನುವ ಭಯದಲ್ಲಿ ನಿದ್ರೆ ಬಾರದಲ್ಲಾ?

ಒಂದೇ ಪರಿಹಾರ – ಟೀವಿಯನ್ನು ಕ್ವಾರಂಟೈನ್ ಮಾಡಿ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಆತ್ಮ ಪರಮಾತ್ಮ ಎನ್ನುತ್ತಾರೆ ಜ್ಞಾನಿಗಳು. ಪರಮಾತ್ಮನನ್ನು ನಂಬದವರ ಆತ್ಮಕ್ಕೆ ಏನೆನ್ನಬೇಕು?

ಭೇಷ್ ಎನ್ನಬೇಕು. ಮಾರ್ಗ ಬಿಡದಿದ್ದರೆ ಅನ್ವೇಷಣೆ ಅಸಾಧ್ಯ.

ಹರಿತಸ, ಬೆಂಗಳೂರು

ಧಾರಾಕಾರ ಮಳೆಗೂ, ದೂರದರ್ಶನದ ಧಾರಾವಾಹಿಗೂ ವ್ಯತ್ಯಾಸವೇನು?

ಅದು ಕೊಳೆ ತೊಳೆಯುತ್ತದೆ; ಇದರಿಂದ ತಲೆ ಕೊಳೆಯುತ್ತದೆ.

ಎಚ್.ಎಂ. ಅನಂತಪದ್ಮನಾಭ, ಮೈಸೂರು

ಮನುಷ್ಯನಿಗೆ ಪೂರ್ವಜನ್ಮದ ವಾಸನೆ ಇರುತ್ತದೆಯೆ?

ಪೂರ್ವಜನ್ಮವೇ ಕಾಲ್ಪನಿಕವಾದ್ದರಿಂದ, ವಾಸನೆ ಇದ್ದರೆ, ಅದೂ ಕಾಲ್ಪನಿಕವೇ.

ಆರ್. ಮಧುಸೂದನ್, ಹಾಸನ

ಕೊರೊನ ಸಂದರ್ಭದಲ್ಲಿ 'ದೈಹಿಕ ಅಂತರ'ದಲ್ಲಿ ಹುಟ್ಟಿದ ಮಗುವಿಗೆ ಹೆಸರೇನಿಡಬಹುದು?

ಟೆಸ್ಟ್ ಟ್ಯೂಬ್ ಬೇಬಿ 2.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಹೆಣ್ಣನ್ನು ಚಿನ್ನ ಎಂದು ಕರೆಯುತ್ತಾರೆ. ಗಂಡನ್ನು ಏಕೆ ಹಾಗೆ ಕರೆಯುವುದಿಲ್ಲ?

ಆ ಚಿನ್ನದಿಂದ ತಯಾರಾದ ನಗವಾದ್ದರಿಂದ ಅವನನ್ನು ಉತ್ತರಕನ್ನಡಿಗರು 'ಸರ' ಎನ್ನುತ್ತಾರೆ.

ಸ್ವಾತಿ ಎಂ.ಎಸ್. ಗೌರಿಬಿದನೂರು

ಅನಿಶ್ಚಿತ ಬದುಕಿನ ನಡುವೆಯೂ ಜನ ಹೊಸ ಮನೆ ಕಟ್ಟಿಸುತ್ತಿದ್ದಾರಲ್ಲಾ...?



ಮುಂದಿನ ಪೀಳಿಗೆ ವರ್ಕ್ ಫ್ರಂ ಹೋಂ ಮಾಡಲು ಹೋಂ ಬೇಕಲ್ಲ!

ನಾಜ್ಯೋತಿ, ಹೂವಿನಹಡಗಲಿ

12ನೇ ಶತಮಾನದಲ್ಲಿ ಬಸವಣ್ಣ ಮೌಢ್ಯದ ವಿರುದ್ಧ ಹೋರಾಡಿದರು. '12' ತಿರುಗಿ '21' ಆದರೂ ಯಥಾಸ್ಥಿತಿಯಲ್ಲಾ?

ಬುದ್ಧನ ಕಾಲದ 'ಆಶೆಯೇ ಪಾಶ' ಬೋಧನೆಯೇ ಪೆಂಡಿಂಗ್‌ನಲ್ಲಿದೆ. ಅದಾದರೆ, ಇದೂ ಆದೀತು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಡಸ್ಟ್‌ಬಿನ್‌ಗೂ, ಮನುಷ್ಯನ ಹೊಟ್ಟೆಗೂ ಏನು ವ್ಯತ್ಯಾಸ?



ತೊಟ್ಟಿಯಲ್ಲಿ ಹುಳು ಏಳುತ್ತದೆ; ಹೊಟ್ಟೆಯಲ್ಲಿ ಹುಳು ಬೀಳುತ್ತದೆ.

ವಿ. ಹಮೀದ್, ವಿಟ್ಲ

ದಾರಿ ತಪ್ಪಿದ ಮಗನಿಗೂ, ದಾರಿ ತಪ್ಪಿದ ಮಗಳಿಗೂ ವ್ಯತ್ಯಾಸವೇನು?

ಅವನನ್ನು 'ಹೊಡಿಮಗ ಹೊಡಿಮಗ...' ಎನ್ನುವರಿರುತ್ತಾರೆ; ಅವಳಿಗೆ 'ತೂಚೀಸ್ ಬಡೀಹೈ ಮಸ್ತ್‌ಮಸ್ತ್' ಎನ್ನುವರು!

■ ರಾಮ್